**ರಮೇಶ:** ಕೇಶವ, ನಿನ್ನ ಸ್ನೇಹಿತ ಮದುವೆಯಾಗಲು ಇಷ್ಟಪಟ್ಟಿರುವ ಹುಡುಗಿ ಚೆನ್ನಾಗಿಲ್ಲ ಅಂತ ಹೇಳೋ.

**ಕೇಶವ:** ನಾನ್ಯಾಕೆ ಹೇಳಲಿ, ನಾನು ಮದುವೆ ಆಗಬೇಕಾದರೆ ಅವನು ಸುಮ್ಮನಿದ್ದ!

***

**ವಿಶ್ವ:** ಅಲ್ಲ ನರಸಿಂಹ, ಈಗೀಗ ಅಂಗಡಿಗಳಿಗೆ ಹೆಚ್ಚಾಗಿ ಹುಡುಗಿಯರ ಹೆಸರನ್ನೇ ಇಡುತ್ತಾರಲ್ಲ ಏಕೆ?

**ನರಸಿಂಹ:** ನಿಮ್ಮಂಥ ಗಂಡಸರು ಸುಲಭವಾಗಿ ನೆನಪು ಮಾಡಿಕೊಳ್ಳಲಿ ಅಂತ!

***

**ಕೃಷ್ಣ:** ನಾಣಿ, ನೆಮ್ಮದಿಗಾಗಿ ದೇವಸ್ಥಾನಕ್ಕೆ ಹೋಗಿ ಬಂದೆ, ಅಲ್ಲಿಂದ ಬಂದ ಮೇಲೆ ಟೆನ್ಷನ್ ಹೆಚ್ಚಾಯಿತು.

**ನಾಣಿ:** ಏಕೆ?

**ಕೃಷ್ಣ:** ದೇವಸ್ಥಾನದಲ್ಲಿ ವಿಪರೀತ ಜನ, ಅವರ ಮಧ್ಯೆದಲ್ಲಿ ನಾನು ಬಂದಿದ್ದು ಆ ದೇವರಿಗೆ ಗೊತ್ತಾಯ್ತೊ ಇಲ್ವೋ ಅಂತ!

***

**ರಾಜು:** ಸವಿತಾ, ನಿನಗೆ ರೂಪ ಇಷ್ಟವೋ, ಬುದ್ಧಿಮತ್ತೆ ಇಷ್ಟವೋ?

**ಸವಿತಾ:** ನನಗೆ ಎರಡೂ ಇಷ್ಟ. ಆದರೆ ನಿನ್ನಲ್ಲಿ ಎರಡೂ ಇಲ್ಲವಲ್ಲ!

***

**ಸುಧಾಕರ:** ಮಹೇಶ, ನನ್ನ ಹೆಂಡತಿ ನನ್ನ ಮಾತನ್ನೇ ಕೇಳಲ್ಲ?

**ಮಹೇಶ:** ಅದಕ್ಕೆ ಏಕೆ ಅಷ್ಟು ಬೇಸರ ಪಟ್ಟುಕೊಳ್ಳುತ್ತೀಯೇ ಎಲ್ಲರ ಹೆಂಡತಿಯರೂ ಅಷ್ಟೆ!

***

**ವೆಂಕಟೇಶ:** ಶೇಖರ, ನಿನಗೆ ಬಹಳ ಬೇಜಾರಾಗುವುದು ಯಾವಾಗ?

**ಶೇಖರ:** ನಮ್ ಹುಡುಗಿ ಗುಡ್ ನೈಟ್ ಹೇಳಿ, ಎಷ್ಟು ಹೊತ್ತಾದರೂ ಇನ್ನು ಆನ್‌ಲೈನ್‌ನಲ್ಲಿಯೇ ಇರ್ತಾಳಲ್ಲ ಆವಾಗ!

***

**ಪುರುಷೋತ್ತಮ:** ಏಕೋ ಆನಂದ, ಬಹಳ ಬೇಜಾರಲ್ಲಿದ್ದೀಯೆ?

**ಆನಂದ:** ನಾನು ಏನು ಆಗಬಾರದು ಅಂತ ಅಂದುಕೊಂಡಿದ್ದೆನೋ ಅದೇ ಆಗೋಯ್ತು.

**ಪುರುಷೋತ್ತಮ:** ಏನೋ, ಒಗಟು ಒಗಟಾಗಿ ಮಾತಾಡ್ತಾ ಇದ್ದೀಯಲ್ಲ.

**ಆನಂದ:** ಏನಂತ ಹೇಳಿ, ಮನೆಯಲ್ಲಿ ಕಳ್ಳತನ ಆಗಬಾರದು ಅಂತ ನಾಯಿ ಸಾಕಿದ್ದೆ. ಈಗ ಆ ನಾಯಿನೇ ಕದ್ದುಕೊಂಡು ಹೋಗಿದ್ದಾರೆ!

***

**ಆತ:** ಹೆಂಡತಿ, ತಾನು ಮಾಡಿದ ಹೊಸ ರುಚಿಯನ್ನು ಮೊದಲು ಪತಿರಾಯನಿಗೆ ಕೊಡುತ್ತಾಳಲ್ಲ ಏಕೆ?

**ಈತ:** ಯಾವುದೇ ಪ್ರಯೋಗವನ್ನು ಮೊದಲು ಮಾಡೋದು ಪ್ರಾಣಿಗಳ ಮೇಲೆ ತಾನೆ?


***

**ನಾಗರಾಜು:** ಅಲ್ಲ ರಮೇಶ, ಎಂದಿಗೂ ನಿನ್ನ ಬಿಡಲಾರೆ ಅಂತಿದ್ದ ಪ್ರೇಯಸಿ, ಈಗ ನಿನ್ನ ಜೊತೆ ಇರಲಾರೆ ಅಂತಿದ್ದಾಳಲ್ಲ?


**ರಮೇಶ:** ಹೌದಾ, ಹಾಗಾದರೆ ನಿನ್ನ ಬ್ಯಾಂಕ್ ಬ್ಯಾಲೆನ್ಸ್ ಗೊತ್ತಾಗಿರಬೇಕು!

***

ಕೋರ್ಟ್ ಆದೇಶದ ಮೇರೆಗೆ ನೋಯ್ಡಾದ 'ಟ್ವಿನ್ ಟವರ್' ನೆಲಸಮ.




ಈ 'ಟ್ವಿನ್ ಟವರ್' ಗಳನ್ನು ಮೊದಲು ಕೆಡವಿ ಸಾಹೇಬರೇ!. ಇವು ಬಡವರ ಜೀವನಕ್ಕೆ ಮಾರಕವಾಗಿವೆ.




ನೋಡಮ್ಮ!. ಅಪ್ಪ ತಮ್ಮ ರೂಢಿಯಂತೆ ನನ್ನ ಬರ್ತಡೇ ಕೇಕ್‌ನಲ್ಲೂ 40% ಕಮಿಷನ್ ಕಟ್ ಮಾಡಿಕೊಂಡೆ ತರುತ್ತಿದ್ದಾರೆ.

**ಮೂರ್ತಿ:** ಕೇಶವ, ಕೊರೊನಾಕ್ಕೂ ಹೆಂಡತಿಗೂ ಇರುವ ವ್ಯತ್ಯಾಸ ಗೊತ್ತಾ?

**ಕೇಶವ:** ಗೊತ್ತಿಲ್ಲ.

**ಮೂರ್ತಿ:** ಕೇಶವ, ಇವೆರಡನ್ನು ಮೊದಲೇ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಸಾಧ್ಯವಾಗದಿದ್ದರೆ ಅವುಗಳ ಜೊತೆಗೆ ಬದುಕಲು ಕಲಿಯಬೇಕು ಅಷ್ಟೆ!

***

**ಭಾಷಣಕಾರ:** ಇದುವರೆಗೂ ನಾನು 'ಆಯಾಸ ಪರಿಹಾರ'ದ ಬಗ್ಗೆ ಮಾಡಿದ ಭಾಷಣ ತಮಗೇನಾದರೂ ಪ್ರಯೋಜನವಾಯಿತೆ?

**ಒಬ್ಬಾತ:** ನನಗಂತೂ ಬಹಳ ಪ್ರಯೋಜನವಾಯಿತು ಸರ್, ನೀವು ಭಾಷಣ ಶುರು ಮಾಡಿದಾಗ ನಿದ್ರೆಗೆ ಜಾರಿದವನು ಈಗ ಎದ್ದೆ. ನನ್ನ ಆಯಾಸವೆಲ್ಲ ಪರಿಹಾರವಾಯ್ತು, ಧನ್ಯವಾದಗಳು ಸರ್!

***

**ಪತಿ:** ಅಲ್ಲ ಕಣೆ, ದೇವರು ನಿನಗೆ ಒಳ್ಳೆಯ ರೂಪ ಕೊಟ್ಟ, ಆದರೆ ಕಡಿಮೆ ಬುದ್ಧಿ ಕೊಟ್ಟ.

**ಪತ್ನಿ:** ಹೌದು, ನೀವು ಮೆಚ್ಚಲಿ ಅಂತ ನನಗೆ ರೂಪ ಕೊಟ್ಟ ನಿಮ್ಮನ್ನು ಮದುವೆಯಾಗಬೇಕಿತ್ತಲ್ಲ, ಅದಕ್ಕೆ ಕಡಿಮೆ ಬುದ್ಧಿ ಕೊಟ್ಟ!

***

**ಕೃಷ್ಣ:** ನಾಣಿ, ನೀನು ಯಾವಾಗಲೂ ಸುಖನಿದ್ರೆ ಮಾಡ್ತೀನಿ ಅಂತಿಯಲ್ಲ ಹೇಗೆ?

**ನಾಣಿ:** ಬಹಳ ಸುಲಭ ಕೃಷ್ಣ, ನೀನು ಹಾಡಿರುವ ಹಾಡು ಕೇಳಿದರೆ ಸಾಕು ಹಾಗೆಯೇ ಸುಖನಿದ್ರೆಗೆ ಜಾರಿ ಬಿಡ್ತೀನಿ!

***

**ಗಂಡ:** ಏನೇ ನಮ್ಮ ಬೀದಿಯ ಹುಡುಗರು ಎಂದೂ ಜಾಗಿಂಗ್‌ಗೆ ಹೋಗ್ತಾ ಇರಲಿಲ್ಲ. ಈಗ ಹೋಗ್ತಾ ಇದ್ದಾರಲ್ಲ?

**ಹೆಂಡತಿ:** ಹೌದು ಕಣ್ರಿ, ಪಕ್ಕದ ಬೀದಿಯ ಹುಡುಗಿಯರು, ಆಂಟಿಯರು ಜಾಗಿಂಗ್‌ಗೆ ಬರುತ್ತಾ ಇದ್ದಾರಂತೆ!

***

**ಹೆಂಡತಿ:** ನನಗೆ ಸ್ವಲ್ಪ ಬುದ್ಧಿವಂತನಾದ ಗಂಡ ಸಿಕ್ಕಿದ್ದರೆ ಚೆನ್ನಾಗಿರುತ್ತಿತ್ತು.

**ಗಂಡ:** ಬುದ್ಧಿವಂತನಾದವನು ಎಂದೂ ಮದುವೆಯೇ ಆಗುವುದಿಲ್ಲ!

**ಹೆಂಡತಿ:** ನೋಡಿದಿರಾ! ಈಗಲಾದರೂ ಗೊತ್ತಾಯಿತೆ ನಿಮಗೆ ಬುದ್ಧಿ ಇಲ್ಲ ಅಂತ!

***

**ಪದ್ಮಮ್ಮ:** ಗೌರಮ್ಮ, ನಮ್ಮ ಮನೆಯಲ್ಲಿ ಎಲ್ಲ ಬೆಲ್ ಸಿಸ್ಟಮ್.

**ಗೌರಮ್ಮ:** ಹೌದಾ, ಹಾಗಾದರೆ ನಿಮ್ಮ ಬೆಲ್ ಕರೆಗೆ ಮೊದಲು ಬರುವವರು ಯಾರು?

**ಪದ್ಮಮ್ಮ:** ನಮ್ಮೆಜಮಾನರು, ಬಂದು ಏನು ತಂದುಕೊಡಲಿ ಅಂತ ಕೇಳ್ತಾರೆ!

ಸಂಗ್ರಹ: **ಶಂಕರೇಗೌಡ ತುಂಬಕೆರೆ,**
**ಮಂಡ್ಯ**